**B**

SL. No. : YYY

ಒಟ್ಟು ಪ್ರಶ್ನೆಗಳ ಸಂಖ್ಯೆ : 34 ]
Total No. of Questions : 34 ]

**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 89-EK** | **NSQF LEVEL-2** | **Code No. : 89-EK**

# ವಿಷಯ : ಹೆಲ್ತ್‌ಕೇರ್

# Subject : Health Care

**(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರಗಳು / Kannada and English Versions)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 28. 06. 2018 ] [ Date : 28. 06. 2018
ಸಮಯ : ಬೆಳಿಗ್ಗೆ 9-30 ರಿಂದ ಬೆಳಿಗ್ಗೆ 11-45 ರವರೆಗೆ ] [ Time : 9-30 A.M. to 11-45 A.M.
ಗರಿಷ್ಠ ಅಂಕಗಳು : 60 ] [ Max. Marks : 60

***ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :***

***General Instructions to the Candidate :***

1. ಈ ಪ್ರಶ್ನೆಪತ್ರಿಕೆಯು 34 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
   This Question Paper consists of 34 objective and subjective types of question.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This question paper has been sealed by reverse jacket. You have to cut on the right side to open the paper at the time of commencement of the examination. Check whether all the pages of the question paper are intact.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನಗಳನ್ನು ಪಾಲಿಸಿ.
   Follow the instructions given against both the objective and subjective types of questions.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
   Figures in the right hand margin indicate maximum marks for the question.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
   The maximum time to answer the paper is given at the top of the question paper. It includes 15 minutes for reading the question paper.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. *Four* alternatives are given for each of the following questions / incomplete statements. Choose the correct alternative and write the complete answer along with its question number and alphabet.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : $10 \times 1 = 10$

1. ಆಸ್ಪತ್ರೆಯಲ್ಲಿ ಗೃಹ ಶುಚಿತ್ವ ವ್ಯವಸ್ಥೆಯ ಕರ್ತವ್ಯದಲ್ಲಿರುವ ವ್ಯಕ್ತಿ ಇದನ್ನು ತಿಳಿದುಕೊಂಡಿರಬೇಕು
   (A) ಹೃದಯರೋಗಶಾಸ್ತ್ರ (B) ಸೂಕ್ಷ್ಮಾಣುಜೀವಿಶಾಸ್ತ್ರ
   (C) ನರರೋಗಶಾಸ್ತ್ರ (D) ಶರೀರಕ್ರಿಯಾಶಾಸ್ತ್ರ

   In hospitals house-keeping person in-charge should know
   (A) Cardiology (B) Bacteriology
   (C) Neurology (D) Physiology

2. ಸೇವಾಕಾಂಕ್ಷಿಯು ಈ ರೋಗದಿಂದ ಬಳಲುತ್ತಿದ್ದಾಗ ದೀರ್ಘಕಾಲದವರೆಗೆ ಆಸ್ಪತ್ರೆಯಲ್ಲಿರಬೇಕಾಗುತ್ತದೆ
   (A) ನ್ಯುಮೋನಿಯಾ (B) ಮಲೇರಿಯಾ
   (C) ಟೈಫಾಯಿಡ್ (D) ಕುಷ್ಠರೋಗ

   A client suffering from which disease has to stay in the hospital for a long time is
   (A) Pneumonia (B) Malaria
   (C) Typhoid (D) Leprosy

3. ಅತ್ಯಂತ ಸೂಕ್ಷ್ಮವಾದ ಹಾಗೂ ಎಂಡೋಸ್ಕೋಪಿಯ ಉಪಕರಣಗಳಿಗೆ ಬಳಸಲಾಗುವ ಪೂತಿನಾಶಕ
   (A) ಫಾರ್ಮಲಿನ್ (B) ಈಥೇನ್
   (C) ಗ್ಲುಟಾರಿಕ್ ಡೈಆಲ್ಡಿಹೈಡ್ (D) ಈಥೈಲ್ ಆಲ್ಕೊಹಾಲ್

   The disinfectant used for high precision instrument and endoscope is
   (A) formalin (B) ethane
   (C) glutaric dialdehyde (D) ethyl alcohol

4. *ಕ್ಲಾಸ್ಟ್ರಿಡಿಯಂ ಟಿಟನಿ* ಬ್ಯಾಕ್ಟೀರಿಯವು ಉಂಟುಮಾಡುವ ರೋಗ
   (A) ಧನುರ್ವಾಯು (B) ಸಿಸ್ಟೈಟಿಸ್
   (C) ಇನ್‌ಫ್ಲುಯಂಜಾ (D) ಕಾಲರಾ

   The disease caused by *Clostridium tetani* is
   (A) tetanus (B) cystitis
   (C) influenza (D) cholera

5. ಪೂತಿನಾಶಕ, ನಿಷ್ಕ್ರಿಮಿಕಾರಕ ಮತ್ತು ಕ್ಯಾನ್ಸರ್‌ಕಾರಕವಾದ ರಾಸಾಯನಿಕ
   (A) ಅಯೋಡಿನ್ (B) ಫಾರ್ಮಲ್ಡಿಹೈಡ್
   (C) ಹೈಪೋಕ್ಲೋರೈಟ್‌ಗಳು (D) ಆಲ್ಕೋಹಾಲ್‌ಗಳು

   The chemical which is disinfectant sterilant and carcinogen is
   (A) Iodine (B) Formaldehyde
   (C) Hypochlorites (D) Alcohols

6. ಎದೆಯ ಭಾಗವನ್ನು ಹೊಟ್ಟೆಯ ಭಾಗದಿಂದ ಬೇರ್ಪಡಿಸುವ ಸ್ನಾಯು ಪೊರೆ

(A) ಎಪಿಗ್ಲಾಟಿಸ್ (B) ಧ್ವನಿಪೆಟ್ಟಿಗೆ

(C) ವಪೆ (D) ಪಿತ್ತಜನಕಾಂಗ

The muscular membrane that separates the chest part and abdomen part is

(A) epiglotts (B) voice box

(C) diaphragm (D) liver

7. ಸಿಸ್ಟಮಿಕ್ ಚಕ್ರವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಮಾನವನ ಹೃದಯದ ಭಾಗಗಳು

(A) ಎಡಹೃತ್ಕರ್ಣ ಮತ್ತು ಎಡಹೃತ್ಕುಕ್ಷಿ (B) ಬಲಹೃತ್ಕರ್ಣ ಮತ್ತು ಬಲಹೃತ್ಕುಕ್ಷಿ

(C) ಎಡಹೃತ್ಕರ್ಣ ಮತ್ತು ಬಲಹೃತ್ಕುಕ್ಷಿ (D) ಎಡಹೃತ್ಕುಕ್ಷಿ ಮತ್ತು ಬಲಹೃತ್ಕರ್ಣ

The parts of the human heart which control the systemic cycle are

(A) left atrium and left ventricle (B) right atrium and right ventricle

(C) left atrium and right atrium (D) left ventricle and right ventricle

8. 15 ರಿಂದ 20 ನಿಮಿಷವಾದರೂ ರಕ್ತಸುರಿಯುವುದು ನಿಲ್ಲದೆ ಇದ್ದಾಗ ಉಪಯೋಗಿಸುವ ವಸ್ತು

(A) ಜೋಲಿ (B) ಸ್ಪ್ಲಿಂಟ್ಸ್

(C) ಡಿಫೈಬ್ರಿಲೇಟರ್ಸ್ (D) ಟಾರ್ನಿಕ್ವೆಟ್ ಬ್ಯಾಂಡೇಜ್

The material used when the bleeding does not stop even for 15 to 20 minutes is

(A) slings (B) splints

(C) defibrilitators (D) tourniquet bandage

9. 30 ರಿಂದ 50 ಹಾಸಿಗೆ ಸಾಮರ್ಥ್ಯ ಹೊಂದಿರುವ ಆಸ್ಪತ್ರೆಯ ಹೆಸರು

(A) ಪ್ರಾಥಮಿಕ ಆರೋಗ್ಯ ಕೇಂದ್ರ (B) ತಾಲ್ಲೂಕು ಆಸ್ಪತ್ರೆ

(C) ಜಿಲ್ಲಾ ಆಸ್ಪತ್ರೆ (D) ಸಮುದಾಯ ಆರೋಗ್ಯ ಕೇಂದ್ರ

The name of the hospital having bed strength of 30 to 50 is

(A) Primary health centre (B) Taluk hospital

(C) District hospital (D) Community health centre

10. ಆಸ್ಪತ್ರೆಗಳಲ್ಲಿ ಕೋಪದಿಂದ ಉಂಟಾಗುವ ತಕ್ಷಣದ ಪರಿಣಾಮ

(A) ಜೈಲು ಪಾಲಾಗುವುದು (B) ಆಸ್ತಿನಾಶ

(C) ಕೆಲಸದ ನಷ್ಟ (D) ಸ್ನೇಹಿತರ ನಷ್ಟ

The immediate effect caused in hospitals due to anger is

(A) going to jail (B) destruction of property

(C) loss of job (D) loss of friends

II. ಸೂಕ್ತವಾದ ಉತ್ತರದಿಂದ ಬಿಟ್ಟಿರುವ ಸ್ಥಳವನ್ನು ಭರ್ತಿ ಮಾಡಿ : 4 × 1 = 4

Fill in the blanks with suitable answer :

11. ಆಹಾರ ಸೇವನೆಯ ನಂತರ ರೋಗಿ ಕುಳಿತ ಭಂಗಿಯಲ್ಲಿ ಇರಬೇಕಾದ ಕನಿಷ್ಠ ಅವಧಿ .............. ನಿಮಿಷಗಳು.

After the meal keep the patient in a sitting position for at least .............. minutes.

12. ಜಠರದ ಅಲ್ಸರ್‌ನಿಂದ ನರಳುತ್ತಿರುವ ರೋಗಿಗೆ ನೀಡಬೇಕಾದ ವಿಶೇಷ ಆಹಾರದ ವಿಧ ............ .

The type of special diet given to the patient suffering from peptic ulcer is ..................... .

13. ರಕ್ತದ ಒತ್ತಡವನ್ನು ಅಳೆಯುವ ಸಾಧನ .................. .

Blood pressure measuring instrument is ................... .

14. $104^{o}$F ಮತ್ತು ಹೆಚ್ಚಿನ ತಾಪಮಾನದಿಂದ ನರಳುತ್ತಿರುವಾಗ, ಅದನ್ನು ............. ಜ್ವರ ಎನ್ನುತ್ತಾರೆ.

A temperature of $104^{o}$F and above is said to be suffering from ................ fever.

III. 15. ***A*-ಪಟ್ಟಿ**ಯಲ್ಲಿ ನೀಡಲಾಗಿರುವ ಅಂಗಾಂಶಗಳನ್ನು ಮತ್ತು ***B*-ಪಟ್ಟಿ**ಯಲ್ಲಿ ಅವುಗಳ ಕಾರ್ಯಗಳನ್ನು ನೀಡಲಾಗಿದ್ದು. ಅವುಗಳನ್ನು ಹೊಂದಿಸಿ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : $4 \times 1 = 4$

The types of tissues are given in **Column-A** and their functions given in **Column-B.** Match them and write the answer along with their letters :

| ***A*-ಪಟ್ಟಿ** <br> **Column-A** | ***B*-ಪಟ್ಟಿ** <br> **Column-B** |
|---|---|
| i) ಮೂಳೆ ಅಂಗಾಂಶ <br> Bone tissue | a) ದೇಹದಲ್ಲಿ ಕೀಲುಗಳ ರಕ್ಷಣೆ ಮತ್ತು ಮೃದು ಅಂಗಗಳಿಗೆ ಆಧಾರ ಒದಗಿಸುತ್ತದೆ <br> protects the joints and supports soft tissue |
| ii) ಅಸ್ತಿಮಜ್ಜೆ <br> Bone marrow | b) ಕೊಬ್ಬನ್ನು ಸಂಗ್ರಹಿಸುತ್ತದೆ <br> stores the fat |
| iii) ಮೃದ್ವಸ್ಥಿ ಅಂಗಾಂಶ <br> Cartilage tissue | c) ದೇಹದ ಒಳಗಿನ ಅಂಗಗಳಿಗೆ ಆಧಾರ ಮತ್ತು ರಕ್ಷಣೆ ನೀಡುತ್ತದೆ <br> protects and supports internal organs of the body |
| iv) ಅಡಿಪೋಸ್ ಅಂಗಾಂಶ <br> Adipose tissue | d) ವಿಶೇಷವಾದ ವಸ್ತುಗಳನ್ನು ಉತ್ಪಾದಿಸಿ ಸ್ರವಿಸುತ್ತವೆ <br> produces and discharges specialized substances |
| | e) ಆಹಾರನಾಳದಲ್ಲಿ ಪದಾರ್ಥಗಳ ಚಲನೆಗೆ <br> movement of food through the digestive tract |
| | f) ರಕ್ತದ ಜೀವಕೋಶಗಳ ಉತ್ಪಾದನೆ ಮಾಡುತ್ತದೆ <br> synthesizes the blood cells |
| | g) ರಕ್ತನಾಳಗಳಲ್ಲಿ ಚಲನೆಗೆ ಕಾರಣವಾಗುತ್ತದೆ <br> causes movement in blood vessels |

IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $6 \times 1 = 6$

Answer the following questions :

16. ರೋಗಿಗೆ ಮಗ್ಗಲು ಮಲಗುವ ಭಂಗಿಯಿಂದಾಗುವ ಪ್ರಯೋಜನಗಳನ್ನು ಬರೆಯಿರಿ.

Write the uses of side lying position of a patient.

17. ವಿಶೇಷತೆಯ ಆಸ್ಪತ್ರೆ ಎಂದರೇನು ?

What is a specialized hospital ?

18. ಶಿಲೀಂದ್ರಗಳನ್ನು ಸಸ್ಯಗಳೆಂದು ಪರಿಗಣಿಸುವುದಿಲ್ಲ. ಏಕೆ ? ವೈಜ್ಞಾನಿಕ ಕಾರಣ ಕೊಡಿ.

Fungi are not considered as plants. Why ? Give scientific reason.

19. ಆಳದ ಗಾಯಕ್ಕೆ ನೀಡುವ ಪ್ರಥಮ ಚಿಕಿತ್ಸೆಯನ್ನು ಬರೆಯಿರಿ.

Write the first-aid given for deep cuts.

20. ಆಸ್ಪತ್ರೆಯಲ್ಲಿ ಪ್ರಯೋಗ ಶಾಲೆಯು ನೆಲಮಾಳಿಗೆಯಲ್ಲಿಯೇ ಇರಬೇಕು. ಏಕೆ ?

In the hospitals laboratories must be located on the ground floor. Why ?

21. ಒಳರೋಗಿಗಳ ಆರೈಕೆ ಎಂದರೇನು ?

What is inpatient care ?

V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $6 \times 2 = 12$

Answer the following questions :

22. ಆಸ್ಪತ್ರೆಗಳು ಹೊರರೋಗಿಗಳ ವಿಭಾಗಗಳನ್ನು ಹೊಂದಿರುವುದು ಅವಶ್ಯಕವಾಗಿದೆ. ಏಕೆ ? ಕಾರಣಕೊಡಿ.

It necessary to have out-patient department in hospitals. Why ? Give reason.

23. ಕ್ರಿಮಿನಾಶಕಗಳು ಮತ್ತು ನಿಷ್ಕ್ರಿಮಿಕಾರಕಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

Write any two differences between antiseptics and disinfectants.

**ಅಥವಾ/OR**

ಈ ಕೆಳಗಿನ ರೋಗಗಳ ಲಕ್ಷಣಗಳನ್ನು ಬರೆಯಿರಿ :

Write the symptoms of the following diseases :

a) ಕ್ಷಯ

Tuberculosis

b) ಮಲೇರಿಯಾ

Malaria

24. ಮಾನವ ಚರ್ಮದ ಅಡ್ಡಸೀಳಿಕೆಯ ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ ಮತ್ತು ಕೆಳಗಿನ ಭಾಗವನ್ನು ಗುರುತಿಸಿ :

ಬೆವರಿನ ಗ್ರಂಥಿ

Draw the diagram showing the structure of transverse section of human skin and label the following part :

Sweat gland

25. ಈ ಕೆಳಗಿನವುಗಳಿಗೆ ಕಾರಣ ಕೊಡಿ :

Give reasons for the following :

a) ವ್ಯಕ್ತಿಯು ಮೂರ್ಛೆ ಹೋಗಿದ್ದರೆ ನೀರು ಕುಡಿಸಬಾರದು.

Do not give water to an unconscious person.

b) ಅಸ್ತಮಾ ರೋಗಿಗಳು ಸುಗಂಧ ದ್ರವ್ಯ ಬಳಸಬಾರದು.

Asthma patients should not use perfumes.

26. ಆಸ್ಪತ್ರೆಯಲ್ಲಿ ಸ್ವಾಗತಕಾರರ ಪ್ರಮುಖ ಕಾರ್ಯಗಳು ಯಾವುವು ?

What are the main functions of receptionist ?

**ಅಥವಾ/OR**

ಆಸ್ಪತ್ರೆಯಲ್ಲಿ ರೋಗಿ ಮತ್ತು ಅವರ ಕುಟುಂಬದವರು ಒತ್ತಡದ ಪರಿಸ್ಥಿತಿಗೆ ಸಿಲುಕಿರುವಾಗ ಸಾಮಾನ್ಯ ಕರ್ತವ್ಯ ಸಹಾಯಕರು ಗಮನಿಸಬೇಕಾದ ಅಂಶಗಳನ್ನು ಪಟ್ಟಿಮಾಡಿ.

List the points that a general duty assistant (GDA) should remember while responding patient and relatives stressed situations.

27. ರೋಗಿಗೆ ಸಂಬಂಧಿಸಿದಂತೆ ಆಸ್ಪತ್ರೆಯಲ್ಲಿ ಕಂಪ್ಯೂಟರ್‌ಗಳ ಉಪಯೋಗಗಳನ್ನು ಪಟ್ಟಿಮಾಡಿ.

List the uses of computers in hospitals related to patient.

VI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $4 \times 3 = 12$

Answer the following questions :

28. ತುರ್ತು ಸೇವೆಯ ಸಂದರ್ಭದಲ್ಲಿ ತುರ್ತು ಸಂಘಟನಾ ತಂಡದ ಪ್ರಮುಖ ಕಾರ್ಯಗಳನ್ನು ತಿಳಿಸಿ.

Mention the functions of emergency organising team in emergency service situation.

29. 'ಹಾಸಿಗೆಯ ಮೇಲಿರುವ ರೋಗಿಯ ಭಂಗಿಯನ್ನು ಆಗಾಗ ಬದಲಾಯಿಸುತ್ತಿರಬೇಕು'. ಏಕೆ ? ಯಾವುದಾದರೂ ಆರು ಕಾರಣಗಳನ್ನು ಕೊಡಿ.

Patient's position on the bed should be changed frequently. Why ? Give any six reasons.

30. ಆಸ್ಪತ್ರೆಯಲ್ಲಿ ಕೋಪವನ್ನು ಉಂಟುಮಾಡುವ ವ್ಯಕ್ತಿಗತವಾದ ಆಂತರಿಕವಾದ ಲಕ್ಷಣಗಳನ್ನು ಬರೆಯಿರಿ.

Write the personal internal characteristics that cause anger in hospital.

31. ಔಷಧ ಪದ್ಧತಿಯ ಆಧಾರದ ಮೇಲೆ ವರ್ಗೀಕರಿಸಲಾಗಿರುವ ಆಸ್ಪತ್ರೆಯ ವಿಧಗಳನ್ನು ಹೆಸರಿಸಿ ಮತ್ತು ಅವುಗಳಿಗಿರುವ ಒಂದು ವ್ಯತ್ಯಾಸಗಳನ್ನು ತಿಳಿಸಿ.

Name the types of hospitals which are classified according to the system of medicine and mention one differences between them.

**ಅಥವಾ/OR**

ಆಸ್ಪತ್ರೆಯಲ್ಲಿ ಆರು ವಿಧದ ವೃತ್ತಿಪರ ಸಿಬ್ಬಂದಿಗಳನ್ನು ಹೆಸರಿಸಿ.

Name the six types of professional staff in a hospital.

VII. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $3 \times 4 = 12$

Answer the following questions :

32. ಮಾನವನ ಜೀರ್ಣಾಂಗ ವ್ಯವಸ್ಥೆಯ ಪ್ರಮುಖ ಭಾಗಗಳ ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ ಮತ್ತು ಕೆಳಗಿನ ಭಾಗಗಳನ್ನು ಗುರುತಿಸಿ :

Draw the diagram showing the structure of major organs of the human digestive system and label the following parts :

a) ಅನ್ನನಾಳ

Esophagus

b) ಡಿಯೋಡಿನಂ

Duodenum

33. a) ಆಸ್ಪತ್ರೆಯಲ್ಲಿ ಹಾಸಿಗೆಯ ಸಿದ್ಧತೆಯು ಒಳಗೊಂಡಿರುವ ಯಾವುದಾದರೂ ನಾಲ್ಕು ತತ್ವಗಳನ್ನು ಬರೆಯಿರಿ.

Write any four principles involved in bed making in hospital.

b) ರೋಗಿಯು ಮುಖ ಕೆಳಗೆ ಮಾಡಿ ಮಲಗುವ ಭಂಗಿಯಿಂದಾಗುವ ಯಾವುದಾದರೂ ನಾಲ್ಕು ಪ್ರಯೋಜನಗಳನ್ನು ಬರೆಯಿರಿ.

Write any four uses of prone position of a patient.

**ಅಥವಾ/OR**

a) ರೋಗಿಯ ರಕ್ತದ ಒತ್ತಡವನ್ನು ಅಳೆಯುವ ಮುನ್ನ ಗಮನಿಸಬೇಕಾದ ಯಾವುದಾದರೂ ನಾಲ್ಕು ಅಂಶಗಳನ್ನು ಬರಯಿರಿ.

Write any four points to be observed before measuring the blood pressure of a patient.

b) ಚಿಕಿತ್ಸಕ ಆಹಾರವು ಒಳಗೊಂಡಿರುವ ಯಾವುದಾದರೂ ನಾಲ್ಕು ತತ್ವಗಳನ್ನು ಬರೆಯಿರಿ.

Write any four principles involved in diet therapy.

34. a) ರೋಗಕಾರಕ ಬ್ಯಾಕ್ಟೀರಿಯ ಸೋಂಕಿನಿಂದ ಉಂಟಾಗುವ ಸಾಮಾನ್ಯ ಪರಿಣಾಮಗಳನ್ನು ತಿಳಿಸಿ.

Mention the general effects of infection by pathogenic bacteria.

b) ಆಸ್ಪತ್ರೆಯಲ್ಲಿ ದೋಭಿಖಾನೆ ಸೇವಾ ವಿಭಾಗದ ಮುಖ್ಯ ಜವಾಬ್ದಾರಿಗಳನ್ನು ಹೆಸರಿಸಿ.

Name the responsibilities of laundry service department in hospitals.

**ಅಥವಾ/OR**

a) ಒಣತಾಪ ಹಾಗೂ ಹಬೆಯನ್ನು ನಿಷ್ಕ್ರಿಮೀಕರಣಕ್ಕೆ ಬಳಸುವುದರಿಂದ ಆಗುವ ಉಪಯೋಗಗಳನ್ನು ತಿಳಿಸಿ.

Mention the uses of dry heat and steam used for sterilization methods.

b) ಸೋಂಕು ನಿಯಂತ್ರಣ ಸಮಿತಿ ಸದಸ್ಯರಾಗಿದ್ದ ನರ್ಸ್ ಮತ್ತು ಸಾಮಾನ್ಯ ಕರ್ತವ್ಯ ನಿರತ ಸಿಬ್ಬಂದಿ ಪಾಲಿಸಬೇಕಾದ ಜವಾಬ್ದಾರಿಗಳನ್ನು ತಿಳಿಸಿ.

Mention the responsibilities followed by the nurse and general duty assistant as a member of the infection control team.